**Spl.C.78/2019**
**PW.6**

**ದಿನಾಂಕಃ 25.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಪ್ರ.ವ.ವ. ದ ಕಾಲಂ 3(ಎ) ರಂತೆ ದೂರನ್ನು ಕೊಟ್ಟ 5 ದಿನಗಳ ಹಿಂದೆ ಘಟನೆ ನಡೆದಿರುತ್ತದೆ ಎನ್ನುವುದು ಕಂಡುಬರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿ, ದೂರನ್ನು ನೀಡಿದ ಹಿಂದಿನ ದಿನದಂದು ಸಹ ಆರೋಪಿ ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾನೆ ಎನ್ನುವುದು ಕಂಡು ಬಂದಿರುತ್ತದೆ ಎನ್ನುತ್ತಾರೆ. ದೂರಿನಲ್ಲಿ, ಘಟನೆಯ ನಂತರ 5 ದಿನಗಳು ಕಳೆದು ದೂರನ್ನು ನೀಡಲು ಯಾವುದೇ ರೀತಿಯ ವಿವರಣೆಯನ್ನು ನೀಡಿರುವುದಿಲ್ಲ. ದೂರುದಾರನಿಗೆ ತೆರೆಜಾ ರವರು ಅವರ ಕೆಲಸವನ್ನು ಮಾಡಲು ಸಾಮಾನ್ಯ ಅಧಿಕಾರ ಪತ್ರದ ಮೂಲಕ ಅಧಿಕಾರ ನೀಡಿರುತ್ತಾರೆ ಎನ್ನುವುದು ಸರಿ. ಈ ದೂರುದಾರಿನಿಗೆ ದಿ.13.07.2017 ಕ್ಕೂ ಮುಂಚಿತವಾಗಿ ತೆರೆಜಾ ರವರು ಅಧಿಕಾರ ಪತ್ರವನ್ನು ಕೊಟ್ಟಿದ್ದ ಬಾಬ್ತು ನನ್ನ ತನಿಖೆಯ ವೇಳೆಯಲ್ಲಿ ಕಂಡುಬಂದಿರುವುದಿಲ್ಲ ಎನ್ನುವುದು ಸರಿ. ದೂರುದಾರ ಈ ಅಧಿಕಾರ ಪತ್ರವನ್ನು ಹೊಂದಿರುವುದನ್ನು ಹೊರತು ಪಡಿಸಿ, ಆ ಸಂಸ್ಥೆ ಗೆ ಆತ ಯಾವುದೇ ರೀತಿಯಲ್ಲೂ ಸಂಬಂಧಪಟ್ಟವನಾಗಿರುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಆ ಸಂಸ್ಥೆ ಗೆ ದೂರುದಾರ ಸಂಬಂಧಪಟ್ಟವನು ಎಂದು ಈ ಸಾಮಾನ್ಯ ಅಧಿಕಾರ ಪತ್ರವನ್ನು ಹೊರತು ಪಡಿಸಿ, ಬೇರೆ ಯಾವುದೇ ದಾಖಲೆಯನ್ನು ನಾನು ತನಿಖಾ ಸಮಯದಲ್ಲಿ ಪಡೆದಿರುವುದಿಲ್ಲ. ದೂರುದಾರ ದಿ.13.07.2017 ಕ್ಕೂ ಮುಂಚೆ ಆ ಸಂಸ್ಥೆಯಲ್ಲಿ ಯಾವ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎನ್ನುವುದನ್ನು ನಾನು ಪ್ರಶ್ನಿಸಿರುತ್ತೇನೆ. ಒಂದು ತಿಂಗಳ ಮುಂಚಿತವಾಗಿಯೇ ಈ ಭೂ ಪರಿವರ್ತನೆ ಕೆಲಸ ಮಾಡಿಸಲು ಚಾಸಾ.5 ರವರು ತಿಳಿಸಿದ್ದರು ಎಂದು ದೂರುದಾರ ತಿಳಿಸಿರುತ್ತಾನೆ. ನಿಪಿ.1 ರಲ್ಲಿ ಈ ಅಂಶ ಕಂಡುಬರುತ್ತಿಲ್ಲ ಎನ್ನುವುದು ಸರಿ.

ಚಾಸಾ.5 ರವರು ನೀಡಿದ್ದ ಅರ್ಜಿಯನ್ನು ನಾನು ನೋಡಿರುತ್ತೇನೆ. ಅದು ನಿಪಿ.14 ರ ಪುಟ 167 ರಲ್ಲಿ ಇದೆ ಎನ್ನುವುದು ಸರಿ. ಸದರಿ ಅರ್ಜಿಯನ್ನು ದಿ.15.07.2017 ರಂದು ನೀಡಿ ಸಿಸ್ಟರ್ ತೆರೆಜಾ ಬಿ ಎಂದು ಸಹಿ ಹಾಕಿರುತ್ತಾರೆ ಎನ್ನುವುದು ಸರಿ. ಆ ಅರ್ಜಿಯೊಂದಿಗೆ ಒಂದು ಭೂ ಪರಿವರ್ತನಾ ನಕಾಶೆಯನ್ನು ಲಗತ್ತಿಸಿರುತ್ತಾರೆ ಎನ್ನುವುದು ಸರಿ. ಅದು ನಿಪಿ.14 ರ ಪು ಸಂಖ್ಯೆ201 ರಲ್ಲಿ ಇರುತ್ತದೆ. ಅದರ ಮೇಲೆ, ಆರ್ ಟಿ ಸಿ ಹಕ್ಕುದಾರರ ಸಹಿ ಎಂದಿರುವ ಸ್ಥಳದಲ್ಲಿ ಸಿಸ್ಟರ್ ತೆರೆಜಾ ಬಿ ಎಂದು ಸಹಿ ಹಾಕಿರುತ್ತಾರೆ ಎನ್ನುವುದು ಸರಿ. ನನ್ನ ತನಿಖೆಯ ಪ್ರಕಾರ ತೆರೆಜಾ ರವರ ಸಹಿ ಸಿಸ್ಟರ್ ತೆರೆಜಾ ಬಿ ಎನ್ನುವುದು ಸರಿ. ಇದು ಕೆಲವು ದಾಖಲೆಗಳಲ್ಲಿ ಕಂಡು ಬಂದಿರುತ್ತದೆ. ನಿಪಿ.1 ಅಧಿಕಾರ ಪತ್ರದಲ್ಲಿ ಕಂಡು ಬರುವ ಸಿಸ್ಟರ್ ತೆರೆಜಾ ಎಂದಿರುವ ಸಹಿಗೂ ಮೇಲ್ಕಂಡ ಪುಟಗಳಲ್ಲಿ ಕಂಡು ಬರುವ ಸಿಸ್ಟರ್ ತೆರೆಜಾ ಬಿ ಎಂದಿರುವ ಸಹಿಗೂ ಸಂಪೂರ್ಣ ವ್ಯತ್ಯಾಸ ಎಂದು ಮಾಡಿದ ಸಲಹೆಗೆ ಸಾಕ್ಷಿ , ಕೆಲವು ದಾಖಲೆಗಳಲ್ಲಿ ಸಿಸ್ಟರ್ ತೆರೆಜಾ ಬಿ ಎಂದಿದೆ ಎನ್ನುತ್ತಾರೆ. ನಿಪಿ.1 ರಲ್ಲಿ ಇರುವ ತೆರೆಜಾ ರವರ ಸಹಿಗೂ ಮತ್ತು ಮೇಲೆ ನೋಡಿದ ನಿಪಿ.14 ರ ಪುಟ ಸಂಖ್ಯೆ167 ಮತ್ತು 201 ರಲ್ಲಿ ರುವ ತೆರೆಜಾ ರವರ ಸಹಿಗೂ ಹೋಲಿಕೆ ಇರುವುದಿಲ್ಲ ಎನ್ನುವುದು ಸರಿಯಲ್ಲ. ದೂರುದಾರ ನಿಪಿ.1 ರಲ್ಲಿ ಇರುವ ಸಹಿಯನ್ನು, ದೂರನ್ನು ಕೊಟ್ಟ ನಂತರ ಮರುದಿನ ನಾನು ಆಕೆಯನ್ನು ಕರೆಯಿಸಿ ನಿಪಿ.1 ರ ಮೇಲೆ ಪಡೆದಿರುತ್ತೇನೆ ಎಂದು ನ್ಯಾಯಾಲಯದ ಮುಂದೆ ಹೇಳಿರುವುದು ಸರಿಯಲ್ಲ.

ನಿಪಿ.1 ನ್ನು ದಿ.12.07.2017 ರಂದು ರಾಜೇಶ್ವರಿ ಎನ್ನುವ ವಕೀಲರು, ನೋಟರಿ ರವರು ಖರೀದಿಸಿ ಅವರೇ ನೋಟರಿ ಮಾಡಿರುತ್ತಾರೆ ಎನ್ನುವುದು ಸರಿ. ನಾನು ಸದರಿ ರಾಜೇಶ್ವರಿಯವರನ್ನು ಕರೆಯಿಸಿ ನಿಪಿ.1 ರ ನೈಜತೆಯ ಬಗ್ಗೆ ಪ್ರಶ್ನಿಸಿರುವುದಿಲ್ಲ.

ನಿಪಿ.2 ರ ಎರಡನೇ ಪ್ಯಾರಾದಲ್ಲಿ ದೂರುದಾರ "ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಿ ವಿಚಾರ ಮಾಡಲಾಗಿ ಅಲ್ಲಿನ ಸಿಬ್ಬಂದಿಯವರೊಬ್ಬರು ಈ ಅರ್ಜಿಯ ವರದಿಗಾಗಿ, ಸಂಬಂಧಿಸಿದ ಹಳೆ ಕೆಸರೆ ಗ್ರಾಮದ

ಗ್ರಾಮ ಲೆಕ್ಕಾಧಿಕಾರಿ ನಾಗೇಶ್ ಕುಮಾರ್ ರವರರಿಗೆ ಕಳುಹಿಸಿದೆ ಎಂದು ತಿಳಿಸಿದರು" ಎಂದಿದೆ ಎನ್ನುವುದು ಸರಿ. ನನ್ನ ತನಿಖೆಯ ಕಾಲದಲ್ಲಿ ಗ್ರಾಮ ಲೆಕ್ಕಾಧಿಕಾರಿಗೆ ಜಿಲ್ಲಾಧಕಾರಿಯವರ ಕಚೇರಿಯಿಂದ ಯಾವುದಾದರೂ ದಾಖಲಾತಿಗಳನ್ನು ಕಳುಹಿಸಿರುತ್ತಾರೋ ಇಲ್ಲವೋ ಎನ್ನುವುದನ್ನು ಪರಿಶೀಲಿಸಿರುತ್ತೇನೆ. ಗ್ರಾಮ ಲೆಕ್ಕಾಧಿಕಾರಿಗೆ ಯಾವುದೇ ದಾಖಲಾತಿಯನ್ನು ಕಳುಹಿಸಿರುವುದಿಲ್ಲ. ಆದರೆ ತಹಶೀಲ್ದಾರ್ ರವರಿಗೆ ಕಳುಹಿಸಿರುತ್ತಾರೆ. ಸದರಿ ಪತ್ರ ನಿಪಿ.14 ರ ಪುಟ ಸಂಖ್ಯೆ 165 ರಲ್ಲಿ ಕಂಡುಬರುತ್ತದೆ ಎನ್ನುವುದು ಸರಿ. ಪುಟ ಸಂಖ್ಯೆ 165 ರಂತೆ ತಹಶೀಲ್ದಾರರು ಅದನ್ನು ರಾಜಸ್ವ ನಿರೀಕ್ಷಕರಿಗೆ ಕಳುಹಿಸಿರುತ್ತಾರೆ ಎನ್ನುವುದು ಸರಿ. ಪುಟ ಸಂಖ್ಯೆ ಪುಟ 165 ರ ಎಡಭಾಗದಲ್ಲಿ ಇರುವಂತಹ ಒಂದು ಕಿರು ಸಹಿ RI ರವರದ್ದಾಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

ನನ್ನ ತನಿಖಾ ಕಾಲದಲ್ಲಿ ಆ ಕಡತವನ್ನು ಯಾರು ಪಡೆದಿರುತ್ತಾರೆ ಎನ್ನುವುದನ್ನು ಕಂಡು ಕೊಂಡಿರುವುದಿಲ್ಲ. ನನ್ನ ತನಿಖಾ ಕಾಲದಲ್ಲಿ ಭೂ ಪರಿವರ್ತನೆಗೆ ಸಂಬಂಧಪಟ್ಟಂತೆ ಕರ್ತವ್ಯಗಳನ್ನು ಯಾರು ನಿರ್ವಹಿಸಬೇಕು ಎನ್ನುವ ಬಾಬ್ತು ದಾಖಲಾತಿಗಳನ್ನು ಪಡಸಿದಿರುತ್ತೇನೆ ಎನ್ನುವುದು ಸರಿ. ಸದರಿ ದಾಖಲಾತಿಗಳು ನಿಡಿ.4 ರ ಪುಟ ಸಂಖ್ಯೆ 116 ರಿಂದ 120 ರವರೆಗೆ ಇರುತ್ತದೆ ಎನ್ನುವುದು ಸರಿ. ಪುಟ ಸಂಖ್ಯೆ 117 ರ ಕ್ರಮ ಸಂಖ್ಯೆ 2 ರಲ್ಲಿ ಸಂಬಂಧಪಟ್ಟ ಉಪ ತಹಶೀಲ್ದಾರ್ ಮತ್ತು ರಾಜಸ್ವ ನಿರೀಕ್ಷಕರು ಮಾತ್ರವೇ ಸದರಿ ಕರ್ತವ್ಯವನ್ನು ಮಾಡಬಹುದಾಗಿರುತ್ತದೆ ಎಂದಿದೆ ಎನ್ನುವುದು ಸರಿ. ಈ ನಿಡಿ.4 ರಂತೆ ಗ್ರಾಮ ಲೆಕ್ಕಾಧಿಕಾರಿಗೆ ಭೂ ಪರಿವರ್ತನೆ ಮಾಡುವ ಬಾಬ್ತು ಯಾವುದೇ ಕೆಲಸ ಕಾರ್ಯ ಇರುವುದಿಲ್ಲ ಎನ್ನುವುದು ಸರಿ. ನನ್ನ ನಂತರದ ತನಿಖಾಧಿಕಾರಿಯವರು ಸಂಗ್ರಹಿಸಿರುವ ದಾಖಲಾತಿಗಳಂತೆ ನಿಡಿ.3 ನ್ನು ದಿ.04.08.2017 ರ ಪತ್ರ ಮುಖೇನಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತಾರೆ ಎನ್ನುವುದು ಸರಿ. ಈ ದಾಖಲಾತಿಯಂತೆ ಒಂದು ಸಂಸ್ಥೆಯ ಹೆಸರಿನಲ್ಲಿರುವ ಜಮೀನನ್ನು ಒಬ್ಬ ವ್ಯಕ್ತಿಯ ಹೆಸರಿಗೆ ಭೂ ಪರಿವರ್ತನೆ ಮಾಡಲು ಅನುಮತಿ ನೀಡಲು ಬರುವುದಿಲ್ಲ ಎಂದು ಮಾಡಿರುವ ಆದೇಶವನ್ನು ಲಗತ್ತಿಸಿ , ತಿಳಿಸಿರುತ್ತಾರೆ ಎನ್ನುವುದು ಸರಿಯಲ್ಲ. ಆದರೆ " ಆರ್

ಟಿ ಸಿ ಯಲ್ಲಿ ಸಂಸ್ಥೆಯ ಹೆಸರು ಬಂದಿರುವುದರಿಂದ ಕರ್ನಾಟಕ ಭೂ ಸುಧಾರಣೆ 109 ರ ಅಡಿ ಆಗಿರುವ ಬಗ್ಗೆ ದಾಖಲೆ ನೀಡಲು ತಿಳುವಳಿಕೆ ಪತ್ರ ನೀಡಿದೆ " ಎಂದು ಆದೇಶ ಮಾಡಿರುತ್ತಾರೆ ಎನ್ನುತ್ತಾರೆ.

ನಿಪಿ.2 ದೂರಿನಲ್ಲಿ ಆರೋಪಿ ರೂ.50,000/- ಕ್ಕಾಗಲಿ, ರೂ.35,000/-ಕ್ಕಾಗಲಿ, ರೂ.30,000/- ಕ್ಕಾಗಲಿ ಬೇಡಿಕೆ ಇಟ್ಟಿರುವುದು ಕಂಡುಬರುವುದಿಲ್ಲ ಎನ್ನುವುದು ಸರಿ. ಆದರೆ ಸಾಕ್ಷಿ ಸ್ವತಃ ನುಡಿಯುತ್ತಾರೆ ಆದರೆ ರೂ.55,000/- ಮತ್ತು ರೂ.40,000/- ಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬಂದಿರುತ್ತದೆ ಎನ್ನುತ್ತಾರೆ. ದೂರಿನಲ್ಲಿ ಲಂಚದ ಹಣವನ್ನು ಇಂತಹ ತಾರೀಖಿನಂದು, ಇಂತಹ ದಿನದಂದು , ಈ ಸಮಯಕ್ಕೆ , ತಂದು ಕೊಡಬೇಕು ಎಂದು ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ ಎನ್ನುವುದು ಸರಿ. ದೂರುದಾರ ಸುಳ್ಳು ಮಾಹಿತಿಯನ್ನು ನೀಡಿ ಸುಳ್ಳು ದೂರನ್ನು ನೀಡಿರುತ್ತಾನೆ ಎನ್ನುವುದು ಸರಿಯಲ್ಲ. ದೂರನ್ನು ಪರಿಶೀಲಿಸಿದ ನಂತರ ನಾನು ಆ ಸಂಸ್ಥೆಗೆ ಹೋಗಿ ತೆರೆಜಾ ರವನ್ನು ಭೇಟಿ ಮಾಡಿ ವಿಚಾರಿಸಿರುವುದಿಲ್ಲ. ತೆರೆಜಾ ಯಾವಾಗಲೂ ಇಟಲಿ ಯಲ್ಲಿ ಇರುತ್ತಿದ್ದರು , ಮೈಸೂರಿಗೆ ಆಗಾಗ್ಗೆ ಬರುತ್ತಿದ್ದರು ಎನ್ನುವುದು ಸರಿಯಲ್ಲ. ದೂರು ಕೊಡುವ ಮೊದಲು ಯಾವ ಸಮಯದಿಂದ ಯಾವ ಸಮಯದವರೆಗೆ ತೆರೆಜಾ ರವರು ಇಟಲಿಯಲ್ಲಿ ಇದ್ದರು ಎನ್ನುವ ಬಗ್ಗೆ ಆಕೆಯ ಪಾಸ್ ಪೋರ್ಟ್ ನ್ನು ಪರಿಶೀಲಿಸಿರುವುದಿಲ್ಲ. ದೂರುದಾರ ಒಬ್ಬ ಸಾಮಾಜಿಕ ಕಾರ್ಯಕರ್ತ ಎಂದು ಹೇಳಿದ್ದ. ಆತ ನಮ್ಮ ಎ ಸಿ ಬಿ ಅಧಿಕಾರಿಗಳಿಗೆ ಪರಿಚಯಸ್ಥನಾಗಿದ್ದ ಎನ್ನುವುದು ಸರಿಯಲ್ಲ. ದೂರುದಾರ ಮೈಸೂರಿನ ಲೋಕಾಯುಕ್ಕೆ ದೂರನ್ನು ಕೊಟ್ಟು ಅಧಿಕಾರಿಗಳನ್ನು ಟ್ರಾಪ್ ಮಾಡಿಸುವುದು ಮತ್ತು ಬೆಂಗಳೂರಿನ ಲೋಕಾಯುಕ್ತ ಮುಖ್ಯ ಕಚೇರಿಗೆ ದೂರನ್ನು ನೀಡಿ ವಿಚಾರಣೆಗೆ ಒಳಪಡಿಸುವುದು ಆತನ ಉದ್ಯೋಗವಾಗಿತ್ತು ಎನ್ನುವುದು ಸರಿಯಲ್ಲ. ಇದಕ್ಕೂ ಮೊದಲು ದೂರುದಾರ ಒಟ್ಟು 9 ಜನ ಸರ್ಕಾರಿ ನೌಕರರ ಮೇಲೆ ದೂರನ್ನು ಬೆಂಗಳೂರಿನ ಲೋಕಾಯುಕ್ತ ಮುಖ್ಯ ಕಚೇರಿಗೆ ನೀಡಿ ವಿಚಾರಣೇಗೆ ಒಳಪಡಿಸಿರುತ್ತಾನೆ ಎನ್ನುವುದು ಸರಿಯಲ್ಲ. ಆ ಎಲ್ಲಾ ಪ್ರಕರಣಗಳಲ್ಲೂ ಆ ಸರ್ಕಾರಿ ನೌಕರರೊಂದಿಗೆ ಒಳ ಒಪ್ಪಂದ ಮಾಡಿಕೊಂಡು ನಂತರದಲ್ಲಿ ವ್ಯತಿರಿಕ್ತ ಸಾಕ್ಷಿಯಾಗಿ ಪರಿವರ್ತನೆಗೊಂಡು ಹಣ ಪಡೆದು ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾನೆ

ಎನ್ನುವುದು ಸರಿಯಲ್ಲ. ಈ ದೂರನ್ನು ಹೊರತು ಪಡಿಸಿ , ದೂರುದಾರ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆ ಸೇರಿ ಇನ್ನೂ 3 ದೂರುಗಳನ್ನು ನೀಡಿ ಮೂವರು ಸರ್ಕಾರಿ ನೌಕರರನ್ನು ಟ್ರಾಪ್ ಮಾಡಿಸಿದ್ದ ಎನ್ನುವುದು ಸರಿಯಲ್ಲ. ಈ ದೂರು ಸಲ್ಲಿಸಿದ ನಂತರ, ದೂರುದಾರ ಇನ್ನೊಂದು ದೂರನ್ನು ನೀಡಿ ಮತ್ತೊಬ್ಬ ಸರ್ಕಾರಿ ನೌಕರರನ್ನು ಸಹ ಟ್ರಾಪ್ ಮಾಡಿಸಿರುತ್ತಾನೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ.

**ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ , ಸಮಯ ನೀಡಲಾಯಿತು**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.